**ಗೌರವಾನ್ವಿತ 1 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಬಂಗಾರಪೇಟೆ**

ಸಿ.ಸಿ. ನಂ.**2023/2025**

ದೋಷಾರೋಪಣೆ

ಶ್ರೀ ಚಂದ್ರಶೇಖರ್ ಅಲಬೂರ್ ಬಿ.ಎ. ಎಲ್‌ಎಲ್‌ಬಿ (ಆನರ್ಸ್) 1 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ಬಂಗಾರಪೇಟೆ ಆದ ನಾನು

ವಿಶ್ವನಾಥ್.,
ಬಿನ್ ಮುನಿಯಪ್ಪ,
ವಾಸಃ ಕಲ್ಕೇರೆ ಗ್ರಾಮ,
ದೊಡ್ಡೂರು ಕರಪನಹಳ್ಳಿ ಅಂಚೆ ,
ಬಂಗಾರಪೇಟೆ ತಾಲ್ಲೂಕು,
ಕೋಲಾರ ಜಿಲ್ಲೆ.

ಎಂಬ ಆರೋಪಿತನಾದ ನಿಮ್ಮ ಮೇಲೆ ಈ ಕೆಳಗಿನಂತೆ ಹೊರಿಸುವ ದೋಷಾರೋಪಣೆ ಏನೆಂದರೆ -

ದಿನಾಂಕಃ31.12.2024 ರಂದು ಅಬಕಾರಿ ಉಪ ನಿರೀಕ್ಷಕರು, ಬಂಗಾರಪೇಟೆ ವಲಯ, ಬಂಗಾರಪೇಟೆ ತಾಲ್ಲೂಕಿನ ಐತಾಂಡ್ಲಹಳ್ಳಿ ಗ್ರಾಮದಲ್ಲಿ ರವರು ಸರ್ಕಾರಿ ವಾಹನ ಸಂಖ್ಯೆ ಕೆ.ಎ-08.ಜಿ-159 ರಲ್ಲಿ ಗಸ್ತು ಮಾಡುತ್ತಿದ್ದಾಗ ಬಂದ ಭಾತ್ಮಿ ಮೇರೆಗೆ ಸಂಜೆ 06.00 ಗಂಟೆ ಸಮಯದಲ್ಲಿ ಆರೋಪಿಯಾದ ವಿಶ್ವನಾಥ ನೀನು ಬಂಗಾರಪೇಟೆ ತಾಲ್ಲೂಕಿನ ಮಜರಾ ಕಲ್ಕೇರೆಯಲ್ಲಿ ಸರೋಜಮ್ಮ ಎಂಬುವರಿಗೆ ಸೇರಿದೆ ಎನ್ನಲಾದ ಸರ್ವೆ ನಂಬರ್ 217 ರ ಜಮೀನಿನಲಿರುವ ಚಿಲ್ಲರೆ ಅಂಗಡಿ ಮೇಲೆ ದಾಳಿ ಮಾಡಿದಾಗ 1) 90 ಮಿಲಿಯ 15 ಓರಿಜಿನಲ್ ಚಾಯ್ಸ್ ವಿಸ್ಕಿ ಮದ್ಯದ ಟೆಟ್ರಾ ಪ್ಯಾಕೆಟ್‌ಗಳು, 2) 90 ಮಿಲಿಯ 25 ಡಿ.ಕೆ.ಡಬಲ್ ಕಿಕ್ ಪೈನ್ ವಿಸ್ಕಿ ಮದ್ಯದ ಟೆಟ್ರಾ ಪ್ಯಾಕೆಟ್‌ಗಳು, 3) 90 ಮಿಲಿಯ ಓಲ್ಡ್ ಅಡ್ಮಿರಲ್ ಬ್ರಾಂಡಿ ಮದ್ಯದ ಟೆಟ್ರಾ ಪ್ಯಾಕೆಟ್‌ಗಳು, 4) 90 ಮಿಲಿಯ 10 ಮ್ಯಾಕ್ ಡವೆಲ್ಸ ಬ್ರಾಂಡಿ ಮದ್ಯದ ಟೆಟ್ರಾ ಪ್ಯಾಕೆಟ್‌ಗಳು, 5)90 ಮಿಲಿಯ 06

ಡಿ.ಎಸ್.ಪಿ ಬಾಂಡಿ ಮದ್ಯದ ಟ್ರೆಟಾ ಪ್ಯಾಕೆಟ್‌ಗಳು, 6) 90 ಮಿಲಿಯ 04 ಹೈವರ್ಾಡ್ಸ್ ಚಿಯರ್ಸ್ ವಿಸ್ಕಿ ಮದ್ಯದ ಟೆಟ್ರಾ ಪ್ಯಾಕೆಟ್‌ಗಳು ಒಟ್ಟು 6.300 ಲೀಟರ್  ಮದ್ಯವನ್ನು ದಾಸ್ತಾನು ಮಾಡಿರುವುದು ಕಂಡು ಬಂದಿದ್ದು, ಹಾಗೂ ಸದರಿ ಆರೋಪಿಯಾದ ನೀವು ಯಾವುದೇ ಪರವಾನಗಿ  ಇಲ್ಲದೇ ಮದ್ಯವನ್ನು ಮಾರಾಟ ಮಾಡಲು ಪ್ರಯತ್ತಿಸಿದ್ದು. ಈ ಮೂಲಕ ಕರ್ನಾಟಕ ಅಬಕಾರಿ ಕಾಯ್ದೆ **1965** ರ ಕಲಂ**.13, 14(2), 32** ಮತ್ತು **43** ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿದ್ದು, ಅದು ನನ್ನ ಸಂಜ್ಞೆಯಲ್ಲಿ ಬರುತ್ತದೆ.

ಪ್ರಶ್ನೆಃ ನಿಮ್ಮ ಮೇಲೆ ಹೊರಿಸಲಾದ ದೋಷಾರೋಪಣೆ ಕೇಳಿದ್ದೀರಾ? ಅದು ನಿಮಗೆ ತಿಳಿಯಿತೇ?

ಉತ್ತರಃ

ಪ್ರಶ್ನೆಃ ನೀವು ಸದರಿ ದೋಷಾರೋಪವನ್ನು ಒಪ್ಪಿಕೊಳ್ಳುತೀರಾ? ಅಥವಾ ನಿಮ್ಮ ವಿರುದ್ಧ ವಿಚಾರಣೆ ನಡೆಯಬೇಕೇ?

ಉತ್ತರಃ

(ಮೇಲಿನ ದೋಷಾರೋಪವನ್ನು ಆಪಾದಿತರಿಗೆ ತಿಳಿದಿರುವ ಭಾಷೆಯಲ್ಲಿ ಓದಿ, ತಿಳಿಸಿ ಹೇಳಿ ಅವರು ನೀಡಿದ ಉತ್ತರವನ್ನು ಬರೆದುಕೊಂಡಿರುವುದಾಗಿ ಈ ಮೂಲಕ ದೃಢೀಕರಿಸಲಾಗಿದೆ.

ದಿನಾಂಕಃ 10.10.2025

ಸಹಿ/-

**1** ನೇ ಅಪರ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫಸಿ, ಬಂಗಾರಪೇಟೆ.